**SC No. 149/2025**
**PW-3**
**CW-4**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ: 57)<br>ನಮೂನೆ ಸಂಖ್ಯೆ: 4 |

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

## ಎಸ್.ಸಿ ನಂ: **149/2025**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಲಕ್ಷ್ಮಣ ಚೌಗಲೆ | ಪ್ರಾಸಾ: 3 |
| ತಂದೆಯ ಹೆಸರು | : | ಗೋಪಾಲ ಚೌಗಲೆ | ಚಾಸಾ: 4 |
| ವಯಸ್ಸು | : | 58 ವರ್ಷ | ದಿನಾಂಕ : 12.08.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಆಟೊ ಚಾಲಕ | |
| ವಾಸಸ್ಥಳ | : | ಗ್ಯಾಂಗವಾಡಿ, ಬೆಳಗಾವಿ | |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನನಗೆ ಚಾಸಾ-5 ಮತ್ತು 6 ಇವರ ಪರಿಚಯವಿರುವುದಿಲ್ಲ. ನಾನು ಈ ಪ್ರಕರಣದ 1 ರಿಂದ 5 ನೇ ಆರೋಪಿತರನ್ನು ಈ ಮೊದಲು ನೋಡಿರುವುದಿಲ್ಲ. ಈಗ್ಗೆ ಸುಮಾರು 3-4 ವರ್ಷಗಳ ಹಿಂದೆ ಮಾಳಮಾರುತಿ ಪೋಲಿಸರು ನನ್ನನ್ನು ಪೋಲಿಸ ಠಾಣೆಗೆ ಕರೆಯಿಸಿ ಕೆಲವು ದಾಖಲಾತಿಗಳ ಮೇಲೆ ನನ್ನ ಸಹಿಯನ್ನು ಪಡೆದು ಪೋಟೋಗಳನ್ನು ತೆಗೆಸಿದ್ದರು. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈಗ ನನಗೆ ತೋರಿಸಿದ ನಿಪಿ-2 ಪಂಚನಾಮೆಯಲ್ಲಿ ನನ್ನ ಸಹಿ

ಇದೆ. ಸಾಕ್ಷಿಯು ಗುರುತಿಸಿದ ಆತನ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಗಿದೆ. ಈಗ ನನಗೆ ತೋರಿಸಿದ ನಿಪಿ-3 ಪೊಟೊದಲ್ಲಿ ನಾನು ಇರುತ್ತೇನೆ. ಈಗ ನನಗೆ ತೋರಿಸಿದ ಇನ್ನೊಂದು ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಆ ಪಂಚನಾಮೆಯನ್ನು ನಿಪಿ-4 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಗಿದೆ. ಈಗ ನನಗೆ ತೋರಿಸಿದ ಪೋಟೊದಲ್ಲಿ ನಾನು ಕಾಣುತ್ತೇನೆ. ಆ ಪೋಟೊವನ್ನು ನಿಪಿ-5 ಎಂದು ಗುರುತಿಸಲಾಗಿದೆ. ಈಗ ನನಗೆ ತೋರಿಸಿದ ಇನ್ನೊಂದು ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಆ ಪಂಚನಾಮೆಯನ್ನು ನಿಪಿ-6 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಗಿದೆ. ಈಗ ನನಗೆ ತೋರಿಸಿದ ಪೋಟೊಗಳಲ್ಲಿ ನಾನು ಕಾಣುತ್ತೇನೆ. ಆ ಪೋಟೊಗಳನ್ನು ನಿಪಿ-7 ರಿಂದ 14 ಎಂದು ಗುರುತಿಸಲಾಗಿದೆ. ಆ ಪಂಚನಾಮೆಗಳಲ್ಲಿ ಎನು ಬರೆದಿದೆ ಮತ್ತು ಆ ಪೊಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಅಭಿಯೋಜನೆಯ ಪರ ಕೇಸಿಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿಯುವುದು ಕಂಡುಬರುತ್ತದೆ, ಈ ಕಾರಣದಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

2. ದಿಃ 09.06.2024 ರಂದು ಮಧ್ಯಾಹ್ನ 3-30 ಗಂಟೆಗೆ ಮಾಳಮಾರುತಿ ಪೋಲಿಸರು ನನ್ನನ್ನು ಮತ್ತು ಚಾಸಾ-6 ರವರನ್ನು ಠಾಣೆಗೆ ಕರೆಯಿಸಿ ಅಲ್ಲಿ ಈ ಪ್ರಕರಣದ 1ನೇ ಆರೋಪಿಯು ಹಾಜರುಪಡಿಸಿದ ಬಿಳಿ ಬಣ್ಣದ ಕೆ ಎ 22 ಎಮ್ ಸಿ 8906 ಮಾರುತಿ ವ್ಯಾಗೆನಾರ್ ಕಾರನ್ನು ಅಮಾನತ್ತು ಪಡಿಸಿಕೊಂಡು ನನ್ನ ಸಮಕ್ಷಮ ನಿಪಿ-2 ರಂತೆ ಒಂದು ಪಂಚನಾಮೆಯನ್ನು ಮಾಡಿ ಆ ಕಾಲಕ್ಕೆ ನಿಪಿ-3 ರಂತೆ ಪೊಟೋ ತೆಗೆದಿದ್ದರು ಎನ್ನುವುದು ನಿಜವಲ್ಲ.

3. ಅದೇ ದಿನ ಸಂಜೆ 5-20 ಗಂಟೆಗೆ ಮಾಳಮಾರುತಿ ಪೋಲಿಸರು ನನ್ನನು ಮತ್ತು ಚಾಸಾ-6 ರವರನ್ನು ಠಾಣೆಗೆ ಕರೆಯಿಸಿ ಅಲ್ಲಿ ಈ ಪ್ರಕರಣದ 3ನೇ ಆರೋಪಿಯು ತಾನು ಮಗುವನ್ನು ಕ್ಲಿನಿಕ್ ನಿಂದ ಪಾರ್ಮ ಹೌಸ ಗೆ ತೆಗೆದುಕೊಂಡು ಹೋಗಲು ಉಪಯೋಗಿಸಿದ ಬಿಳಿ ಬಣ್ಣದ ಕೆ ಎ 22 ಎಮ್ 2660 ನಂಬರಿನ ಮಾರುತಿ ಸ್ವೀಪ್ಟ ಕಾರನ್ನು ಹಾಜರುಪಡಿಸಿದ್ದು ಅದನ್ನು ಪೋಲಿಸರು ಅಮಾನತ್ತು ಪಡಿಸಿಕೊಂಡು ನನ್ನ ಸಮಕ್ಷಮ ನಿಪಿ-4 ರಂತೆ ಒಂದು ಪಂಚನಾಮೆಯನ್ನು ಮಾಡಿ ಆ ಕಾಲಕ್ಕೆ ನಿಪಿ-5 ರಂತೆ ಪೊಟೋ ತೆಗೆದಿದ್ದರು ಎನ್ನುವುದು ನಿಜವಲ್ಲ.

4. ದಿಃ 19.06.2024 ರಂದು ಬೆಳಿಗ್ಗೆ 10-20 ಗಂಟೆಗೆ ಮಾಳಮಾರುತಿ ಪೋಲಿಸರು ನನ್ನನ್ನು ಮತ್ತು ಚಾಸಾ-5 ರವರನ್ನು ಠಾಣೆಗೆ ಕರೆಯಿಸಿ ಅಲ್ಲಿ 1 ರಿಂದ 5 ಆರೋಪಿತರು ಇದ್ದರು ಮತ್ತು ಅವರನ್ನು ನಮ್ಮ ಸಮಕ್ಷಮ ವಿಚಾರಣೆ ಮಾಡಿದ್ದರು ಎನ್ನುವುದು ನಿಜವಲ್ಲ. ಆ ಬಳಿಕ 1 ಮತ್ತು 2ನೇ ಆರೋಪಿತರು ಮಗುವನ್ನು ಮಾರಾಟ ಮಾಡುವ ಸ್ಥಳವಾದ ಕಿಲ್ಲಾ ಕೆರೆಯ ಹತ್ತಿರ ಕರೆದುಕೊಂಡು ಹೋದಲ್ಲಿ ಆ ಸ್ಥಳವನ್ನು ತೋರಿಸುತ್ತೇವೆ ಎಂದು ಹೇಳಿದ ಪ್ರಕಾರ ಆರೋಪಿತರು ನಮ್ಮನ್ನು ಮತ್ತು ಪೋಲಿಸರನ್ನು ಆ ಸ್ಥಳಕ್ಕೆ ಕರೆದುಕೊಂಡು ಹೋಗಿ ಆ ಸ್ಥಳವನ್ನು ತೋರಿಸಿಕೊಟ್ಟಿದ್ದರು ಎನ್ನುವುದು ನಿಜವಲ್ಲ. ಆ ಬಳಿಕ 3ನೇ ಆರೋಪಿಯು ಪವಿತ್ರಾಳನ್ನು ತನ್ನ ಕ್ಲಿನಿಕ್ ನಲ್ಲಿ ಹೆರಿಗೆ ಮಾಡಿಸಿದ್ದು ಆ ಸ್ಥಳವನ್ನು ತೋರಿಸಿಕೊಡುತ್ತೇನೆ ಎಂದು ಹೇಳಿದ ಪ್ರಕಾರ ನಮ್ಮನ್ನು ಕರೆದುಕೊಂಡು ಹೋಗಿ ಕಿತ್ತೂರಿನ ರಿಯಾಜ್ ಕ್ಲಿನಿಕ್ ನ್ನು ತೋರಿಸಿ ಕೊಟ್ಟಿದ್ದ ಎನ್ನುವುದು ನಿಜವಲ್ಲ. ಆ ಕ್ಲಿನಿಕ್ ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ ಸೀಲು ಮಾಡಿದ್ದ ಕಾರಣ ತಾಲ್ಲೂಕು ವೈದ್ಯಾಧಿಕಾರಿಗಳನ್ನು ಕರೆಯಿಸಿ ಆ ಕ್ಲಿನಿಕ್ ನ್ನು ಓಪನ್ ಮಾಡಿ ಅಲ್ಲಿ ಪಂಚನಾಮೆ ಕ್ರಮವನ್ನು ಮಾಡಿದ್ದರು ಎನ್ನುವುದು ನಿಜವಲ್ಲ.

**SC No. 149/2025**
**PW-3**
**CW-4**

5. ಆ ಬಳಿಕ 3ನೇ ಆರೋಪಿಯು ತಾನು ಮಗುವನ್ನು ಮಾರಾಟ ಮಾಡಿದ ಬಗ್ಗೆ 4 ಮತ್ತು 5ನೇ ಆರೋಪಿತರಿಂದ ಪಡೆದ ಹಣವನ್ನು ತನ್ನ ಮನೆಯಲ್ಲಿ ಇಟ್ಟುಕೊಂಡಿರುವುದಾಗಿ ಹೇಳಿ ಅದೇ ಕಟ್ಟಡದ ಕೆಳಭಾಗದಲ್ಲಿರುವ ಮನೆಯನ್ನು ತೋರಿಸಿಕೊಟ್ಟಿದ್ದನು ಎನ್ನುವುದು ನಿಜವಲ್ಲ. ಆ ಬಳಿಕ 3ನೇ ಆರೋಪಿಯು ತಾನು ಮಗುವನ್ನು ಇಟ್ಟ ಸ್ಥಳವಾದ ಕಿತ್ತೂರು ಹೊರವಲಯದ ಪಾರ್ಮ ಹೌಸ ಗೆ ಕರೆದುಕೊಂಡು ಹೋಗಿ ಅದನ್ನು ತೋರಿಸಿಕೊಟ್ಟಿದ್ದು, ಅಲ್ಲಿ ಕೆಲಸದಲ್ಲಿದ್ದ ಚಾಸಾ-34 ರವರಿಗೆ ಆ ಮಗುವನ್ನು ನೋಡಿಕೊಳ್ಳಲು ಕೊಟ್ಟಿದ್ದಾಗಿ ಹೇಳಿದ್ದರು ಎನ್ನುವುದು ನಿಜವಲ್ಲ. ಆ ಕಾಲಕ್ಕೆ ಹಾಜರಿದ್ದಂತಹ ಚಾಸಾ-32 ರಿಂದ 34 ರವರನ್ನು ಪೋಲಿಸರು ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ದಾಖಲು ಮಾಡಿದ್ದರು ಎನ್ನುವುದು ನಿಜವಲ್ಲ. ಆ ಬಳಿಕ 3ನೇ ಆರೋಪಿಯು 1 ಮತ್ತು 2ನೇ ಆರೋಪಿತರಿಂದ ಮಗುವನ್ನು ರೂ. 60 ಸಾವಿರ ಹಣಕ್ಕೆ ಮಾರಾಟ ಮಾಡಿದ ಸ್ಥಳವನ್ನು ತೋರಿಸಿಕೊಟ್ಟಿದ್ದರು ಎನ್ನುವುದು ನಿಜವಲ್ಲ. ಆರೋಪಿತರು ನಮ್ಮನ್ನು ಕಿತ್ತೂರು ತಾಲ್ಲೂಕಿನ ಸಾಯಿ ಮಂದಿರದ ಹತ್ತಿರ ಸರ್ವಿಸ್ ರಸ್ತೆಯಲ್ಲಿ ಹಣವನ್ನು ಪಡೆದುಕೊಂಡಿರುವುದಾಗಿ ಹೇಳಿ ಆ ಸ್ಥಳವನ್ನು ತೋರಿಸಿ ಕೊಟ್ಟಿದ್ದರು ಎನ್ನುವುದು ನಿಜವಲ್ಲ. ಆ ಬಳಿಕ 1ನೇ ಆರೋಪಿಯು ತಾನು ಖರೀದಿಸಿದ ಮಗುವನ್ನು ಮಹೇಶ್ವರಿ ಮುತಗಿಯವರ ಮನೆಯಲ್ಲಿ ಇಟ್ಟಿದ್ದೆ ಎಂದು ಹೇಳಿ ನಮ್ಮನ್ನು ಚಿಕ್ಕಹಟ್ಟಿಹೋಳಿಗೆ ಕರೆದುಕೊಂಡು ಹೋಗಿ ಅಲ್ಲಿ ಚಾಸಾ-35 ರವರ ಮನೆಯನ್ನು ತೋರಿಸಿಕೊಟ್ಟಿದ್ದರು ಎನ್ನುವುದು ನಿಜವಲ್ಲ. ಆ ಮನೆಯಲ್ಲಿ ಚಾಸಾ-35 ಮತ್ತು ಚಾಸಾ-36 ರವರು ಇದ್ದು ಅವರನ್ನು ಪೋಲಿಸರು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದರು ಎನ್ನುವುದು ನಿಜವಲ್ಲ. ಅವರು ತಮ್ಮ ಹೇಳಿಕೆಗಳಲ್ಲಿ 1ನೇ ಆರೋಪಿಯು ಒಂದು ದಿನ ಆ ಮಗುವನ್ನು ತಮ್ಮ ಮನೆಯಲ್ಲಿ ಇಟ್ಟು ಮಾರನೇ ದಿನ 1ನೇ ಆರೋಪಿಯು ಆ ಮಗುವನ್ನು ತೆಗೆದುಕೊಂಡು ಹೋಗಿದ್ದರು ಎಂದು ಹೇಳಿದ್ದರು ಎನ್ನುವುದು ನಿಜವಲ್ಲ. ಈ ಪ್ರಕಾರ ಪೋಲಿಸರು ನನ್ನ ಸಮಕ್ಷಮ ನಿಪಿ-6 ರಂತೆ ಪಂಚನಾಮೆ ಮಾಡಿ ನಾವು ಹೋದ ಸ್ಥಳಗಳಲ್ಲಿ ನಿಪಿ-7 ರಿಂದ ನಿಪಿ-14 ರಂತೆ ಪೋಟೋಗಳನ್ನು ತೆಗೆದಿದ್ದರು ಎನ್ನುವುದು ನಿಜವಲ್ಲ.

ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿಃ

ಎಲ್ಲಾ ಆರೋಪಿತರ ಪರ ವಕೀಲರು ಸಾಕ್ಷಿಗೆ ತಮ್ಮ ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.